# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 319 | Pages. 2 | Date: 15-11-2025, SATURDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 319 – ಪುಟಗಳು : 2 | 15-11-2025 ಶನಿವಾರ | Ph: 8762954248 | ದರ : ₹1


# ಉಸಿರು ನಿಲ್ಲಿಸಿದ ಹಸಿರು ಮಾತೆ ತಿಮ್ಮಕ್ಕ

## ಮಕ್ಕಳಂತೆ ಗಿಡ ಬೆಳೆಸಿದ ವೃಕ್ಷಮಾತೆ | ಕಂಬನಿ ಮಿಡಿದ ಗಣ್ಯರು

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಶತಾಯುಷಿ, ಪದ್ಮಶ್ರೀ ಪುರಸ್ಕೃತ ವೃಕ್ಷಮಾತೆ, ಸಾಲುಮರದ ತಿಮ್ಮಕ್ಕ (114) ವಯೋಸಹಜ ಕಾಯಿಲೆಯಿಂದ ಶುಕ್ರವಾರ ಬೆಂಗಳೂರಿನ ಜಯನಗರದಲ್ಲಿರುವ ಅಪೋಲೊ ಆಸ್ಪತ್ರೆಯಲ್ಲಿ ವಿಧಿವಶರಾದರು.

ಬೆಂಗಳೂರಿನಲ್ಲಿ ಸಾಕು ಮಗ ಉಮೇಶ್ ಬಳ್ಳೂರು ಜೊತೆಗೆ ನೆಲೆಸಿದ್ದ ಸಾಲುಮರದ ತಿಮ್ಮಕ್ಕ ಅವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಎರಡು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಗುಬ್ಬಿ ತಾಲ್ಲೂಕು ಹೊಸೂರು ಗ್ರಾಮದಲ್ಲಿ 1911ರ ಜೂ. 30 ರಂದು ಜನಿಸಿದ ತಿಮ್ಮಕ್ಕ ಅವರ ಬಾಲ್ಯ ತೀರಾ ಕಷ್ಟಕರವಾಗಿತ್ತು. ಕೂಲಿ ಕೆಲಸ ಮಾಡುತ್ತಲೇ ಬೆಳೆದ ತಿಮ್ಮಕ್ಕ ಶಾಲೆಯ ಮುಖ ನೋಡಿದವರಲ್ಲ. 15 ವಯಸ್ಸಿನಲ್ಲಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ವಿಷ ಸರ್ಪ ಕಚ್ಚಿ ಸಾವಿನ ದವಡೆಯಿಂದ ಪಾರಾದರು. 19ನೇ ವಯಸ್ಸಿಗೆ ಬೆಂಗಳೂರು ದಕ್ಷಿಣ ಕನ್ನಡ ಜಿಲ್ಲೆ ಹುಲಿಕಲ್ ಗ್ರಾಮದ ಚಿಕ್ಕಯ್ಯ ಎಂಬುವವರನ್ನು ವಿವಾಹವಾಗಿ ದಾಂಪತ್ಯ ಜೀವನ ಪ್ರಾರಂಭಿಸಿದರು. ದಂಪತಿ ಗ್ರಾಮ ಸಮೀಪದ ಕಲ್ಲು ಗಣಿಗಾರಿಕೆಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿಕೊಂಡಿದ್ದರು. ಮದುವೆಯಾಗಿ 25 ವರ್ಷ ಕಳೆದರೂ ತಿಮ್ಮಕ್ಕ ಮತ್ತು ಚಿಕ್ಕಯ್ಯ ದಂಪತಿಗೆ ಮಕ್ಕಳಿರಲಿಲ್ಲ. ಆ ಕೊರಗು ಮರೆಯಲು ತಿಮ್ಮಕ್ಕ ಅವರು ತಮ್ಮೂರಿನ ರಸ್ತೆ ಬದಿ ಗಿಡಗಳನ್ನು ನೆಟ್ಟರು. ಅವುಗಳನ್ನೇ ತಮ್ಮ ಮಕ್ಕಳೆಂದು ನಿತ್ಯ ನೀರು ಹಾಕಿ, ದನಕರುಗಳು ತಿನ್ನದಂತೆ ನೋಡಿಕೊಂಡು ಪೋಷಿಸಿದರು. ಆ ಗಿಡಗಳೀಗ ದೊಡ್ಡ ಮರಗಳಾಗಿ ಬೆಳೆದು ನಿಂತಿವೆ. ಗಿಡಗಳನ್ನು ಮಕ್ಕಳಂತೆ ಕಂಡು ಪೋಷಿಸಿ ಬೆಳೆಸಿದ್ದ ತಿಮ್ಮಕ್ಕ ಅವರ ಸಾಧನೆಗೆ 2019ರಲ್ಲಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಸೇರಿ ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಹಲವು ಪ್ರಶಸ್ತಿಗಳು, ಪುರಸ್ಕಾರಗಳು ಬಂದಿವೆ.

### ಸಾಕು ಮಗ ಉಮೇಶ್ ಉಪಚಾರ

ಸಾಲುಮರದ ತಿಮ್ಮಕ್ಕ ಅವರ ಪರಿಸರ ಪ್ರಿಯ ಕೆಲಸಗಳ ವರದಿಯನ್ನು




ಪತ್ರಿಕೆಯಲ್ಲಿ ಓದಿದ ಬೇಲೂರು ತಾಲ್ಲೂಕು ಬಳ್ಳೂರು ಗ್ರಾಮದ ಉಮೇಶ್ 2004ರ ಸಮಯದಲ್ಲಿ ತಿಮ್ಮಕ್ಕ ಅವರನ್ನು ಹುಡುಕಿ ಹುಲಿಕಲ್‌ಗೆ ತೆರಳಿದ್ದರು. ನಂತರ ಸಮಯ ಸಿಕ್ಕಾಗಲೆಲ್ಲಾ ಅವರನ್ನು ಭೇಟಿಯಾಗಿ ಕುಶಲೋಪರಿ ವಿಚಾರಿಸುತ್ತಾ ಹತ್ತಿರವಾದರು. ಒಡಹುಟ್ಟಿದವರು ಯಾರೂ ಇಲ್ಲದ ಹಿನ್ನಲೆಯಲ್ಲಿ ತಿಮ್ಮಕ್ಕ ಅವರ ಬದುಕು ದಯನೀಯವಾಗಿತ್ತು. ಹೀಗಾಗಿ 2007ರಲ್ಲಿ ಉಮೇಶ್ ಅವರನ್ನೇ ತಿಮ್ಮಕ್ಕ ದತ್ತು ಪಡೆದರು. ಬಳಿಕ ಬಳ್ಳೂರು ಹಾಗೂ ಬೆಂಗಳೂರಿನಲ್ಲಿ ಸಾಕು ಮಗನ ಜೊತೆ ಇದ್ದರು.

ಸಾಲುಮರದ ತಿಮ್ಮಕ್ಕ ಅವರ ಪಾರ್ಥಿವ ಶರೀರ ಅಂತಿಮ ದರ್ಶನಕ್ಕೆ ಬೇಲೂರಿನಲ್ಲಿ ಸಕಲ ವ್ಯವಸ್ಥೆ ಮಾಡಲಾಗಿದೆ. ಶುಕ್ರವಾರ ಸಂಜೆ 6 ಗಂಟೆಗೆ ಹುಲಿಕಲ್ ಗ್ರಾಮದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾಡಳಿತ ಗೌರವ ಸಲ್ಲಿಸಿದ ಬಳಿಕ ರಾತ್ರಿ 9 ಗಂಟೆಗೆ ಬೇಲೂರಿಗೆ ಕರೆತರಲಾಯಿತು. ಸಾಲುಮರದ ತಿಮ್ಮಕ್ಕ ಅವರ ನಿಧನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಶ್ರೇಯಸ್ ಪಟೇಲ್ ಸೇರಿದಂತೆ ಅನೇಕರು ಸಂತಾಪ ಸೂಚಿಸಿದ್ದಾರೆ.

### ಹಲವು ಪ್ರಶಸ್ತಿಗೆ ಭಾಜನ

ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ರಾಜ್ಯ ಹಾಗು ರಾಷ್ಟ್ರೀಯ ಮಟ್ಟದ ಅನೇಕ ಪ್ರಶಸ್ತಿಗಳು ಲಭಿಸಿವೆ. ರಾಷ್ಟ್ರೀಯ ಪೌರ ಪ್ರಶಸ್ತಿ (1995), ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ (1997), ವೀರಚಕ್ರ ಪ್ರಶಸ್ತಿ (1997), ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ) ಮಾನ್ಯತೆ ಪಡೆದ ಪ್ರಮಾಣ ಪತ್ರ, ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಶ್ಲಾಘನೆಯ ಪ್ರಮಾಣ ಪತ್ರ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ (2000), ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ (2019), ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಸೇರಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.



# ಬಿಹಾರದಲ್ಲಿ ಎನ್‌ಡಿಎ ಗೆಲುವು ಬಿಜೆಪಿ ಸಂಭ್ರಮಾಚರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಬಿಹಾರ ಮತದಾರರು ಮತ್ತೊಮ್ಮೆ ಎನ್‌ಡಿಎಗೆ ಮತ ಹಾಕಿದ್ದಾರೆ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವತ್ ತಿಳಿಸಿದರು.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಭರ್ಜರಿ ಬಹುಮತ ಪಡೆದ ಹಿನ್ನೆಲೆಯಲ್ಲಿ ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ವಿಜಯೋತ್ಸವದಲ್ಲಿ ಮಾತನಾಡಿ, ದೇಶಾದ್ಯಂತ ಬಿಜೆಪಿ ಪರ ಅಲೆಯಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತಗಳ್ಳತನ ಆರೋಪ ಸುಳ್ಳೆಂಬುದು ಈ ಫಲಿತಾಂಶದಿಂದ ಸಾಬೀತಾಗಿದೆ ಎಂದರು.

ಮುಖಂಡ ಅಶ್ವತ್ಥ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶದಲ್ಲಿ ನಡೆಯುತ್ತಿರುವ ಅಭಿವೃದ್ಧಿ, ಪಾರದರ್ಶಕ ಆಡಳಿತ, ಬಡವರ ಪರ ಯೋಜನೆಗಳು ಬಿಹಾರ ಮತದಾರರನ್ನು ಮತ್ತೊಮ್ಮೆ ಎನ್‌ಡಿಎ ಪರ ನಿಲ್ಲಿಸುವಲ್ಲಿ ಪ್ರಮುಖ ಕಾರಣವಾಗಿದೆ. ಜನರು ಮತ್ತೆ ಮೋದಿ ಅವರ ಕೈ ಹಿಡಿದಿದ್ದಾರೆ. ಕಾಂಗ್ರೆಸ್ ಪಕ್ಷ ವೋಟ್ ಚೋರಿ ಎಂದು ಚುನಾವಣಾ ಆಯೋಗಕ್ಕೂ ಬಿಜೆಪಿ ವಿರುದ್ಧವೂ ಅಪಪ್ರಚಾರ ನಡೆಸಿದರೂ ಮತದಾರರಿಂದ ಯಾವುದೇ ಬೆಂಬಲ ಪಡೆಯಲು ಸಾಧ್ಯವಾಗಿಲ್ಲ. ಈ ಚುನಾವಣೆ ದೇಶದ ಜನತೆ ಮೋದಿ ಪರ ನಿಂತಿರುವುದನ್ನು ಸ್ಪಷ್ಟಪಡಿಸಿದೆ. ಮುಂದಿನ ದಿನಗಳಲ್ಲಿ ಕರ್ನಾಟಕವೂ ಕಾಂಗ್ರೆಸ್ ಮುಕ್ತವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕರ ಪತ್ನಿ ಪ್ರತಿಭಾ ಮಂಜುನಾಥ್, ತಾಲೂಕು ಮುಖಂಡರಾದ ಯೋಗೇಶ್, ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ, ನಗರ ಬಿಜೆಪಿ ಅಧ್ಯಕ್ಷ ಲೋಕೇಶ್, ನಾರಾಯಣ ಆಳ್ವ, ಪ್ರದೀಪ್, ಶರತ್, ರೋಹಿತ್ ಇತರರಿದ್ದರು.

# ಪಿಎಂಶ್ರೀ ಶಾಲೆಯಲ್ಲಿ ಮಕ್ಕಳ ದಿನಾಚರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಕಲಗೂಡು: ಕೊಣನೂರು ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಪೋಷಕರು-ಶಿಕ್ಷಕರ ಮಹಾಸಭೆ ಹಾಗೂ ಮಕ್ಕಳ ದಿನಾಚರಣೆ ಹಹಮ್ಮಿಕೊಳ್ಳಲಾಗಿತ್ತು. ಸಂಪನ್ಮೂಲ ವ್ಯಕ್ತಿ ನಾಗರಾಜ್



ಮಾತನಾಡಿ, ಇಂದಿನ ಮಕ್ಕಳು ಭವಿಷ್ಯದ ಆಸ್ತಿ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪೋಷಕರ ಕರ್ತವ್ಯ. ಮನೆಯಲ್ಲಿ ವಾತಾವರಣ ಹೇಗಿರುತ್ತದೋ ಮಕ್ಕಳು ಅದೇ ರೀತಿ ಬೆಳೆಯುತ್ತಾರೆ. ಆದ್ದರಿಂದ ತಂದೆ ತಾಯಿ ಎಚ್ಚರಿಕೆಯಿಂದ ಇರಬೇಕು. ಅವಾಚ್ಯ ಶಬ್ದಗಳ ಬಳಕೆ, ದುಶ್ಚಟ ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವ ಮೂಲಕ ಶ್ರೇಷ್ಠ ಆಸ್ತಿಯಾಗಿ ರೂಪಿಸಬೇಕು ಎಂದು ಸಲಹೆ ನೀಡಿದರು.

ಶಿಕ್ಷಕ ಶೇಷಾಚಲ ಮಾತನಾಡಿ, ಬಾಲ್ಯದಲ್ಲಿ ಖುಷಿಯನ್ನು ಅನುಭವಿಸಿದರೆ ಮುಪ್ಪಿನಲ್ಲಿ ನೋವು ಅನುಭವಿಸುತ್ತೇವೆ. ಸರ್ಕಾರವು ಶಿಕ್ಷಣವನ್ನು ಉತ್ತೇಜಿಸಲು ಹಲವಾರು ಕಾರ್ಯಕ್ರಮಗಳನ್ನ ಜಾರಿಗೆ ತಂದಿದ್ದು ಅವುಗಳ ಪ್ರಯೋಜನ ಪಡೆಯಬೇಕು. ಮಕ್ಕಳನ್ನು ವಿದ್ಯಾವಂತರಾಗಿ ಮಾಡಲು ಪೋಷಕರು ಪಣತೊಟ್ಟು ಅವರ ಉನ್ನತ ಮಟ್ಟಕ್ಕೆ ಕಾರಣವಾಗಬೇಕು. ಪೋಷಕರು ಮತ್ತು ಶಿಕ್ಷಕರು ಸೇರಿ ಒಬ್ಬ ವಿದ್ಯಾರ್ಥಿ ಜೀವನ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಹೇಳಿದರು. ಸಮಾಜ ಶಿಕ್ಷಕಿ ಎಲ್ಲಾ ಶಾಲಾ ಮಕ್ಕಳಿಗೆ ಸಂವಿಧಾನ ಪೀಠಿಕೆಯ ಪ್ರತಿಜ್ಞೆ ಬೋಧಿಸಿದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಮುಖ್ಯ ಶಿಕ್ಷಕ ಮಹೇಶ್, ಸಿಆರ್‌ಪಿ ಕುಮಾರ್, ಶಿಕ್ಷಕ ಶೇಷಾಚಲ, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಾಜು, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ರಂಗಸ್ವಾಮಿ, ಸುನಂದ, ಸವಿತಾ ಮತ್ತಿತರರಿದ್ದರು.

# ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ 3 ವರ್ಷದ ಡಿಂಪನಾ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಕುಂಚದ ಲೋಕದಲ್ಲಿ ಕೇವಲ 3 ವರ್ಷ ನಾಲ್ಕು ತಿಂಗಳ ವಯಸ್ಸಿನಲ್ಲೇ ಡಿಂಪನಾ ಎಸ್. ದೇಸಾಯಿ, ಚಿತ್ರಕಲೆಯ ಅದ್ಭುತ ಕೌಶಲ್ಯಕ್ಕಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗುವ ಅಪರೂಪದ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ಚಿತ್ಕಲಾ ಫೌಂಡೇಶನ್ ಅಧ್ಯಕ್ಷ ಬಿ.ಎಸ್. ದೇಸಾಯಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಡಿಂಪನಾ ಸಾಧನೆಯನ್ನು ಅಸಾಧಾರಣ ಪ್ರತಿಭೆಯ ಸ್ಫೂರ್ತಿ. ಡಿಂಪನಾ ಈಗಾಗಲೇ 350ಕ್ಕೂ ಹೆಚ್ಚು ಚಿತ್ರಗಳನ್ನು ರಚಿಸಿದ್ದಾಳೆ. ಕೇವಲ ನಾಲ್ಕು ವರ್ಷಕ್ಕೂ ಕಡಿಮೆ ವಯಸ್ಸಿನ ಈ ಬಾಲ ಕಲಾವಿದೆಯ ಕಲಾತ್ಮಕ ನಿರೂಪಣೆ, ಬಣ್ಣಗಳ ಬಳಕೆ, ಆಕಾರಗಳ ವಿನ್ಯಾಸ ಹಾಸನದ ಕಲಾಶ್ರೀ ಗ್ಯಾಲರಿಯಲ್ಲಿ ನಡೆದ ಕಲಾ ಪ್ರದರ್ಶನದಲ್ಲಿ ಅವಳ 70 ಆಯ್ದ ಕಲಾಕೃತಿಗಳನ್ನು ಸಾರ್ವಜನಿಕ ವೀಕ್ಷಣೆಗೆ ತೆರೆದಿಡಲಾಗಿತ್ತು ಎಂದರು.

ಪ್ರದರ್ಶನಕ್ಕೆ ಬಂದ ಕಲಾ ರಸಿಕರು, ಕಲಾವಿದರು, ಗ್ಯಾಲರಿ ವೀಕ್ಷಕರು ಎಲ್ಲರೂ ಆಕೆಯ ಬಣ್ಣಗಳ ನಿರೂಪಣೆ ಕಂಡು ಮಾರು ಹೋದರು ಎಂದರು.

ಹಾರುವ ಹಕ್ಕಿಗಳು, ಗಾಳಿಯಂತೆ ಹರಿಯುವ ಹರಿವುಗಳು, ಮರಗಳ ಮೃದುವಾದ ರೇಖಾಚಿತ್ರಗಳು, ನೃತ್ಯ ಮಾಡುವಂತೆ ಕಾಣುವ ಆಕೃತಿಗಳು ಇವುಗಳ ದರ್ಶನವೇ ಮಗು ಮನಸ್ಸಿನ ಉಲ್ಲಾಸ, ವಿಮುಕ್ತ ಕಲ್ಪನೆ ಮತ್ತು ನಿರ್ಬಂಧವಿಲ್ಲದ ಅಭಿವ್ಯಕ್ತಿಯ ಪ್ರತಿಬಿಂಬವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಶಿಕಿರಣ್ ದೇಸಾಯಿ, ಶಶಿಕಲಾ ಇದ್ದರು.

# ವಿದ್ಯಾರ್ಥಿಗಳು ಶಿಸ್ತು ರೂಢಿಸಿಕೊಳ್ಳಲಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಶಿಸ್ತು ಮತ್ತು ಸಂಯಮವನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು. ಪರಿಶ್ರಮವಿದ್ದಲ್ಲಿ ಪ್ರತಿಭೆ ರೂಪುಗೊಳ್ಳುತ್ತದೆ ಎಂದು ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಪ್ರತಿಭಾ ಮಂಜುನಾಥ್ ಹೇಳಿದರು.

ಶುಕ್ರವಾರ ಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಏರ್ಪಡಿಸಿದ್ದ ಮಕ್ಕಳ ದಿನಾಚರಣೆ ಹಾಗೂ ಪೋಷಕರ ಮಹಾಸಭೆ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ವಿವಿಧ ವಿಷಯ ತಿಳಿದುಕೊಳ್ಳುವ ಆಸಕ್ತಿ ಬೆಳೆಸಿಕೊಂಡರೆ ಮತ್ತು ಆ ನಿಟ್ಟಿನಲ್ಲಿ ಪ್ರಯತ್ನಶೀಲರಾದರೆ ಜ್ಞಾನ ಹರಿದು ಬರುತ್ತದೆ. ಅದರಿಂದ ವ್ಯಕ್ತಿತ್ವ ಉನ್ನತವಾಗಲು ಸಾಧ್ಯ. ತಂದೆ ತಾಯಿಗೆ ಕೊಡುವ ಗೌರವವನ್ನು ವಿದ್ಯೆ ಕಲಿಸಿದ ಗುರುವಿಗೂ ಕೊಡುವುದನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು. ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೂ ಅದಕ್ಕೆ ಮೂಲ ಗುಣಾತ್ಮಕ ಶಿಕ್ಷಕ ಅಗತ್ಯ. ಇಂಥ ಅತ್ಯವಶ್ಯಕ ಶಿಕ್ಷಣವು ಶಿಕ್ಷಕರಿಂದ ಮಾತ್ರ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಜವಾಬ್ದಾರಿ ಹಾಗೂ ಮಹತ್ವದ ಪಾತ್ರಗಳ ಬಗ್ಗೆ ಬೇರೆ ಹೇಳಬೇಕಿಲ್ಲ ಎಂದರು.

ಪ್ರಾಂಶುಪಾಲ ರಮೇಶ್ ಮಾತನಾಡಿ, ಸರ್ಕಾರದ ಆದೇಶದಂತೆ ರಾಜ್ಯಾದ್ಯಂತ ಏಕಕಾಲದಲ್ಲಿ ಪೋಷಕರ ಮಹಾ ಸಭೆ ನಡೆಸಲಾಗುತ್ತಿದೆ. ಸರ್ಕಾರಿ ಕಾಲೇಜಿನಲ್ಲಿ ದಾಖಲಾತಿ ಹೆಚ್ಚಿಸಲು ಚಾಲನೆ ನೀಡುತ್ತಿದ್ದೇವೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಕರು ಹಾಗೂ ಪೋಷಕರು ಸಭೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಉಪನ್ಯಾಸಕರು, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು.



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದಲ್ಲಿ ಹಮ್ಮಿಕೊಂಡಿದ್ದ ಖಾಸಗಿ ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಹಾರನಹಳ್ಳಿ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ಸ್ವಾಮೀಜಿ, ಕೊಡಗಿನ ಕೀರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮಿಜಿ, ಅರೆಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಶ್ರೀ, ಕಲ್ಲಮಠದ ಶ್ರೀ ಮಹಾಂತ ಸ್ವಾಮೀಜಿ, ಹಾಸನ ತಣ್ಣೀರುಹಳ್ಳ ಮಠದ ವೀಜಯಕುಮಾರ ಸ್ವಾಮೀಜಿ, ಬಂಡೆಮಠದ ಶ್ರೀ ಶಿವಲಿಂಗ ಸ್ವಾಮೀಜಿ, ಇಮ್ಮಡಿ ಶಿವಲಿಂಗ ಸ್ವಾಮೀಜಿ, ತೊರೆನೂರು ಮಠದ ಶ್ರೀ ಮಲ್ಲೇಶ್ ಸ್ವಾಮೀಜಿ, ಮಾಜಿ ಶಾಸಕ ಬಿ.ಆರ್.ಗುರುದೇವ್, ತಾಲ್ಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಜಿಲ್ಲಾ ನಿರ್ದೇಶಕ ಅದ್ದೂರಿ ಕುಮಾರ್, ಮಾಜಿ ಅಧ್ಯಕ್ಷ ಬಿ.ಎಸ್.ರೋಹೀತ್ ಭಾಗವಹಿಸಿದ್ದರು.

# ಕಾರ್ಮಿಕರ ಖಾಯಂ, ವೇತನ ಪರಿಷ್ಕರಣೆಗೆ ಸಿಐಟಿಯು ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಕಾರ್ಮಿಕರ ಮಾಸಿಕ ಕನಿಷ್ಠ ವೇತನವನ್ನು 36 ಸಾವಿರ ರೂ.ಗೆ ಹೆಚ್ಚಿಸಬೇಕು ಹಾಗು ಗುತ್ತಿಗೆ-ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಲಾಗಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ವರಲಕ್ಷ್ಮಿ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 16ನೇ ರಾಜ್ಯ ಸಮ್ಮೇಳನದಲ್ಲಿ ಈ ಎರಡು ನಿರ್ಣಯ ಕೈಗೊಳ್ಳಲಾಗಿದೆ. ಕರ್ನಾಟಕದ 1.5 ಕೋಟಿ ಕಾರ್ಮಿಕರು ಎದುರಿಸುತ್ತಿರುವ ದೀರ್ಘಕಾಲೀನ ಆರ್ಥಿಕ ಸಂಕಷ್ಟ ಮತ್ತು ಉದ್ಯೋಗ ಅಭದ್ರತೆಯ ಬಿಕ್ಕಟ್ಟುಗಳನ್ನು ಪರಿಹರಿಸುವ ಗುರಿ ನಮ್ಮದು. ಮೊದಲಿಗೆ ಕನಿಷ್ಠ ವೇತನ ಪರಿಷ್ಕರಣೆ ಆಗಲೇಬೇಕು. ಏಕೆಂದರ ಕಳೆದ 7 ವರ್ಷಗಳಿಂದ ವೇತನ ಪರಿಷ್ಕರಣೆಯಾಗದೆ ಸುಮಾರು 1.5 ಕೋಟಿ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ ಎಂದರು.

ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ ಶೇ. 50-60ರಷ್ಟು ಗುತ್ತಿಗೆ ಮತ್ತು ಹೊರ ಗುತ್ತಿಗೆ ಕಾರ್ಮಿಕರನ್ನು ಶೋಷಣೆಯಿಂದ ಮುಕ್ತಗೊಳಿಸಿ, ವಿಶೇಷ ಕಾನೂನಿನ ಮೂಲಕ ಖಾಯಂಗೊಳಿಸಬೇಕು. ಸರ್ಕಾರ ತನ್ನ ಕರಡು ಅಧಿಸೂಚನೆಯಲ್ಲಿ ಕೌಶಲ್ಯ ಮತ್ತು ವಲಯಗಳ ಆಧಾರದ ಮೇಲೆ 23,000-30,000 ದವರೆಗೆ ವೇತನ ಪ್ರಸ್ತಾಪಿಸಿದೆ.

ಆದರೆ ಸಿಐಟಿಯು ಇದನ್ನು ತಿರಸ್ಕರಿಸಿದ್ದು, 36,000 ವೇತನ ನ್ಯಾಯಸಮ್ಮತ ಎಂದು ಪ್ರತಿಪಾದಿಸಿದೆ.

ಪ್ಲಾಂಟೇಶನ್ ಕಾರ್ಮಿಕರಿಗೆ ದಿನಕ್ಕೆ ಕೇವಲ 461, ಬೀಡಿ ಕಾರ್ಮಿಕರಿಗೆ ದಿನಕ್ಕೆ 350 ರೂ. ಕೂಲಿ ದಾಟಿಲ್ಲ. ಇದು ಸರಿಯಾಗಬೇಕು ಎಂದರು.

ಖಾಸಗಿ ಉತ್ಪಾದನಾ ವಲಯದಲ್ಲಿ ಶೇ.50ಕ್ಕಿಂತ ಹೆಚ್ಚು ಮತ್ತು ಸರ್ಕಾರಿ ಸೇವೆಗಳಲ್ಲಿ ಶೇ. 60ಕ್ಕಿಂತ ಹೆಚ್ಚು ಕಾರ್ಮಿಕರು ಅಸುರಕ್ಷಿತ ಉದ್ಯೋಗಗಳಲ್ಲೇ ದುಡಿಯುತ್ತಿದ್ದಾರೆ.

ಪ್ರತಿ ವರ್ಷ ಗುತ್ತಿಗೆ ನವೀಕರಣವಾಗುವುದೋ, ಇಲ್ಲವೋ ಎಂಬ ಭಯ, ಶಾಸನಾತ್ಮಕ ಸೌಲಭ್ಯಗಳ ನಿರಾಕರಣೆ ಮತ್ತು ಹಕ್ಕುಗಳ ದಮನವನ್ನು ಕಾರ್ಮಿಕರು ಎದುರಿಸುತ್ತಿದ್ದಾರೆ. ಸಹಕಾರಿ ಸಂಘಗಳ ಸ್ಥಾಪನೆ ಕಾಯಂ ಉದ್ಯೋಗಕ್ಕೆ ಪರ್ಯಾಯವಲ್ಲ ಮತ್ತು ಇದರಿಂದ ಉದ್ಯೋಗ ಭದ್ರತೆ ಅಥವಾ ಶಾಸನಾತ್ಮಕ ಸೌಲಭ್ಯ ಖಾತ್ರಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಸಮ್ಮೇಳನ ನಿರ್ಣಯ ಸಮಿತಿ ಸಂಚಾಲಕಿ ಯಮುನಾ ಗಾಂವ್ಕರ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎಂಬಿ.ಪುಷ್ಪ ಹಾಜರಿದ್ದರು.



### ಇಂದು ಬೃಹತ್ ರ್‍ಯಾಲಿ

ಸಮ್ಮೇಳನದ ಅಂತಿಮ ದಿನವಾದ ಶನಿವಾರ ಮಧ್ಯಾಹ್ನ 12 ಗಂಟೆಗೆ ಹೇಮಾವತಿ ಪ್ರತಿಮೆಯಿಂದ ಬೃಹತ್ ಕಾರ್ಮಿಕರ ರ್‍ಯಾಲಿ ಆರಂಭವಾಗಲಿದೆ. ಕೆಂಪು ಸಮವಸ್ತ್ರ ಧರಿಸಿದ ಕಾರ್ಮಿಕರು ಮತ್ತು ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಈ ಮೆರವಣಿಗೆ ಶಿಸ್ತುಬದ್ಧವಾಗಿ ನಡೆಯಲಿದೆ. ಜಿಲ್ಲಾಧಿಕಾರಿ ಕಚೇರಿಯ ಹಿಂಭಾಗದಲ್ಲಿ ಬಹಿರಂಗ ಸಮಾವೇಶದೊಂದಿಗೆ ಮುಕ್ತಾಯಗೊಳ್ಳಲಿದೆ ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ತಿಳಿಸಿದರು.

# ದಲಿತರ ಭೂಮಿ ಕಬಳಿಕೆ ಆರೋಪ: ಕ್ರಮಕ್ಕೆ ಒತ್ತಾಯ




ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಜಾತಿ-ಧರ್ಮದ ಸಂಬಂಧವೇ ಇಲ್ಲದೆ ಪೌತಿ ಖಾತೆಯನ್ನು ಮಾಡಿಸಿಕೊಂಡು ದಲಿತರ ಭೂಮಿ ಕಬಳಿಸಲಾಗಿದೆ ಎಂದು ಜೈಭೀಮ್ ಕ್ರಾಂತಿ ಸೇನೆಯ ಜಿಲ್ಲಾಧ್ಯಕ್ಷ ಬೆಳಗೋಡು ಬಸವರಾಜು ಆರೋಪಿಸಿದರು.

ಪಟ್ಟಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೇಕ್ ಮಹಮ್ಮದ್ ಎಂಬುವವರು ಅಕ್ರಮ ಎಸಗಿದ್ದು ಕಠಿಣ ಕ್ರಮ ಜರುಗಿಸಬೇಕು. ತಾಲ್ಲೂಕಿನ ಬೆಳಗೋಡು ಹೋಬಳಿ ಚಿಕ್ಕನಾಯಕನಹಳ್ಳಿ ಗ್ರಾಮದ ಸರ್ವೆ ನಂ. 68ರಲ್ಲಿ 1 ಎಕರೆ 20 ಗುಂಟೆ ಜಮೀನು ಎಲ್.ಎನ್.ಡಿ 43/82-83 ಆದೇಶದಂತೆ ಪರಿಶಿಷ್ಟ ಜಾತಿಗೆ ಮೀಸಲಾದ ಕೋಟಾದಡಿ ಸಿದ್ದಯ್ಯ ಬಿನ್ ಪುಟ್ಟಯ್ಯ ಅವರಿಗೆ ಮಂಜೂರು ಮಾಡಲಾಗಿತ್ತು. ಸಿದ್ದಯ್ಯ ಅವರು ಮೃತಪಟ್ಟ ನಂತರ ಎಂ.ಆರ್ 5/84-85 ಮೂಲಕ ಅವರ ಪತ್ನಿ ಸಿದ್ದಮ್ಮ ಅವರ ಹೆಸರಿನಲ್ಲಿ ಪೌತಿ ಖಾತೆ ದಾಖಲಾಗಿತ್ತು. ಸಿದ್ದಮ್ಮ ಜೀವಂತವಾಗಿರುವುದನ್ನು ಕುಟುಂಬವು ಸ್ಪಷ್ಟಪಡಿಸಿದೆ. ಈ ವೇಳೆ, ಶೇಕ್ ಮಹಮದ್ ಎಂಬುವರು ಸುಳ್ಳು ಹೇಳಿಕೆ ನೀಡಿ ಸಿದ್ದಯ್ಯ ನನ್ನ ತಂದೆಟ ಎಂದು ತೋರಿಸಿ, ದಾಖಲೆಗಳನ್ನು ತಿರುಚಿ, ಸಿದ್ದಮ್ಮ ಅವರನ್ನು ಮೃತರು ಎಂದು ದಾಖಲಿಸಿ ಜಮೀನಿನ ಪೌತಿಖಾತೆ ಮಾಡಿಕೊಂಡಿದ್ದಾರೆ. ಇದು ಅತ್ಯಂತ ಗಂಭೀರ ಅಪರಾಧವಾಗಿದೆ. ಈ ಖೋಟಾ ದಾಖಲೆ ಸೃಷ್ಟಿಯ ಪ್ರಕ್ರಿಯೆಯಲ್ಲಿ ಕೆಲವು ಗ್ರಾಮ ಲೆಕ್ಕಿಗರು, ರೆವಿನ್ಯೂ ಇನ್ಸ್‌ಪೆಕ್ಟರ್, ಉಪ ತಹಸೀಲ್ದಾರ್ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಸಹಕರಿಸಿರುವುದು ಕಂಡು ಬರುತ್ತಿದೆ. ಆರೋಪಿಗಳು ಸಾಕ್ಷಿ ನಾಶ ಮಾಡುವ ಸಾಧ್ಯತೆ ಇರುವುದರಿಂದ ಮುಂಜಾಗ್ರತಾ ಕ್ರಮ ವಾಗಿ ಶೇಕ್ ಮಹಮ್ಮದ್ ವಿರುದ್ಧ ಗಡಿಪಾರು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರಕರಣದ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿದ್ದರೆ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ತಾಲೂಕು ಅಧ್ಯಕ್ಷ ಉದಯ್ ಕುಮಾರ್, ಯಲ್ಲಪ್ಪ, ಸಿದ್ದಮ್ಮ, ನಿಂಗರಾಜ್ ಉಪಸ್ಥಿತರಿದ್ದರು.

# ಮೆಕ್ಕೆಜೋಳ ಖರೀದಿಗಾಗಿ ಸರ್ಕಾರಕ್ಕೆ ಪತ್ರ ಬರೆದ ಡಿಸಿ

## ರೈತರಲ್ಲಿ ಮೂಡಿದ ಆಶಾಭಾವ | ಜಿಲ್ಲಾದ್ಯಂತ 4,81,069 ಮೆಟ್ರಿಕ್ ಟನ್ ಉತ್ಪಾದನೆ ಗುರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಭತ್ತ ಮತ್ತು ರಾಗಿಯಂತೆ ಮೆಕ್ಕೆಜೋಳವನ್ನು ಬೆಂಬಲ ಬೆಲೆಯಡಿ ಖರೀದಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಆಹಾರ ನಾಗರಿಕ ಸರಬರಾಜು ವ್ಯವಹಾರಗಳ ಕಾರ್ಯದರ್ಶಿಗೆ ಪತ್ರ ಬರೆದಿದ್ದು ರೈತರಲ್ಲಿ ಆಶಾಭಾವ ಮೂಡಿಸಿದೆ. ಮುಸುಕಿನ ಜೋಳ ಈ ಬಾರಿ ಬಿಳಿಸುಳಿ ರೋಗದಿಂದ ನಲುಗಿದ್ದು ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಳಪೆ ಬಿತ್ತನೆ ಬೀಜ ಹಾಗೂ ಹವಾಮಾನ ವೈಪರೀತ್ಯದಿಂದ ನಿರೀಕ್ಷಿತ ಇಳುವರಿ ಸಿಕ್ಕಿಲ್ಲ. ಇರುವ ಅಲ್ಪ ಬೆಳೆಯನ್ನಾದರೂ ಬೆಂಬಲ ಬೆಲೆಯಡಿ ಖರೀದಿಸಿ ನೆರವಾಗಬೇಕೆಂದು ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ಪದಾಧಿಕಾರಿಗಳು ಆಗ್ರಹಿಸಿದ್ದರು. ಆ ಹಿನ್ನೆಲೆಯಲ್ಲಿ ಮುತುವರ್ಜಿ ವಹಿಸಿರುವ ಜಿಲ್ಲಾಧಿಕಾರಿ ಸರ್ಕಾರದ ಮಟ್ಟದಲ್ಲಿ ಚರ್ಚೆಗೆ ವೇದಿಕೆ ಸೃಷ್ಟಿಸಿದ್ದಾರೆ.

### 1700 ರೂ. ದರ ನಿಗದಿ

ಪ್ರಸ್ತುತ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್ ಮೆಕ್ಕೆ ಜೋಳಕ್ಕೆ 1700 ರಿಂದ 1800 ರೂ. ದರ ನಿಗದಿಪಡಿಸಲಾಗಿದೆ. ಸಾಲ ಸೋಲ ಮಾಡಿ ಬೆಳೆ ಕೈಗೊಂಡಿದ್ದ ರೈತರು ಆರ್ಥಿಕ ಸಮಸ್ಯೆಯಿಂದ ಪಾರಾಗಲು ಕಡಿಮೆ ಬೆಲೆಗೆ ಮಾರಾಟ ಮಾಡುವಂತಾಗಿದೆ. ಆದರೆ ಮಧ್ಯಪ್ರದೇಶ ಸೇರಿ ಮತ್ತಿತರ ರಾಜ್ಯಗಳಲ್ಲಿ ಪ್ರತಿ ಕ್ವಿಂಟಾಲ್‌ಗೆ 2,400 ರೂ.ನಂತೆ ಖರೀದಿಸಲಾಗುತ್ತಿದೆ. ಅದೇ ನಿಯಮದಂತೆ ನಮ್ಮ ರಾಜ್ಯದಲ್ಲೂ ಖರೀದಿ ಪ್ರಾರಂಭಿಸಬೇಕೆನ್ನುವುದು ರೈತ ಮುಖಂಡರ ಆಗ್ರಹವಾಗಿದೆ.

### ಮೆಕ್ಕೆಜೋಳ ಖರೀದಿ ಸುಲಭವಲ್ಲ

ಕೃಷಿ ಹಾಗು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳ ಪ್ರಕಾರ ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಅಸಾಧ್ಯದ ಪ್ರಕ್ರಿಯೆ ಎನ್ನಲಾಗಿದೆ. ರಾಗಿ ಹಾಗೂ ಭತ್ತವನ್ನು ಪಡಿತರ ವಿತರಣೆಗೆ ಬಳಸುವುದರಿಂದ ಬೆಂಬಲ ಬೆಲೆಯಡಿ ಅವಶ್ಯಕತೆಗೆ ತಕ್ಕಷ್ಟು ಖರೀದಿ ಮಾಡಲಾಗುತ್ತದೆ. ಮೆಕ್ಕೆ ಜೋಳವನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸದೆ ಇರುವುದರಿಂದ ಅದನ್ನು ಖರೀದಿಸಿದರೆ ಪ್ರಯೋಜನವಿಲ್ಲ. ಆದ್ದರಿಂದ ಖರೀದಿ ಮಾಡುವುದು ಸುಲಭವಲ್ಲ. ರೈತರ ಸಮಸ್ಯೆಗೆ ಸ್ಪಂದಿಸಿ ಖರೀದಿಸಲು ಸೂಚಿಸಿದರೆ ಪ್ರಕ್ರಿಯೆ ಪ್ರಾರಂಭಿಸುತ್ತೇವೆಂದು ಅಧಿಕಾರಿಗಳು ಹೇಳುತ್ತಾರೆ.

ಜಿಲ್ಲೆಯು 2,29,974 ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1,01,065 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆ ಕೈಗೊಳ್ಳಲಾಗಿದೆ. ಅಂದರೆ ಶೇ. 40 ರಷ್ಟು ಭೂಮಿಯಲ್ಲಿ ಮೆಕ್ಕೆಜೋಳ ಬೆಳೆಯಲಾಗುತ್ತಿದೆ. ಹೈನುಗಾರಿಕೆ ಹಾಗು ವಾತಾವರಣಕ್ಕೆ ಜೋಳದ ಫಸಲು ಚೆನ್ನಾಗಿರುತ್ತದೆ. ಪ್ರಸ್ತುತ ಬೆಳೆಯು ಕಟಾವಿನ ಹಂತದಲ್ಲಿದ್ದು 4,81,069 ಮೆಟ್ರಿಕ್ ಟನ್ ಉತ್ಪಾದನೆ ಗುರಿ ಹಾಕಿಕೊಳ್ಳಲಾಗಿದೆ. ಮಾರುಕಟ್ಟೆಯಲ್ಲಿ 1700 ರಿಂದ 1800 ರೂ.ಗೆ ಮಾರಾಟವಾಗುತ್ತಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ಕ್ವಿಂಟಾಲ್‌ಗೆ 400 ರೂ. ಇಳಿಕೆಯಾಗಿದೆ. ಪ್ರತಿ ಕ್ವಿಂಟಾಲ್‌ಗೆ 2400 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿದ್ದರೂ ರೈತರು ಒತ್ತಾಯ ಪೂರ್ವಕವಾಗಿ ಕಡಿಮೆ ಬೆಲೆಗೆ ಮಾರಾಟ ಮಾಡುವಂತಾಗಿದೆ.

### ಶೇ. 5 ರಿಂದ 10 ರಷ್ಟು ಪಶು ಆಹಾರ ಉತ್ಪಾದನೆಗೆ

ಜಿಲ್ಲೆಯಲ್ಲಿನ ಮೆಕ್ಕೆಜೋಳದ ಒಟ್ಟು ಉತ್ಪಾದನೆಯಲ್ಲಿ ಶೇ. 5 ರಿಂದ 10 ರಷ್ಟು ಮಾತ್ರ ಪಶು ಆಹಾರ ಉತ್ಪಾದನೆಗಾಗಿ ಕೆಎಂಎಫ್ ಖರೀದಿ ಮಾಡುತ್ತಿದೆ. ಉಳಿದ ರೈತರು ಬೆಳೆ ಮಾರಾಟಕ್ಕೆ ಸ್ಥಳೀಯ ಮಾರುಕಟ್ಟೆಯನ್ನೇ ಅವಲಂಬಿಸುವಂತಾಗಿದೆ. ರೈತರನ್ನು ನಷ್ಟದಿಂದ ಪಾರು ಮಾಡಲು ಬೆಂಬಲ ಬೆಲೆಯಡಿ ಖರೀದಿಸಲು ಖರೀದಿ ಕೇಂದ್ರ ತೆರೆಯಲು ಅನುಮತಿ ಮಾಡಿಕೊಡುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಕೋರಿದ್ದಾರೆ.



> ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿಸುವಂತೆ ಜಿಲ್ಲಾಡಳಿತ ಮೂಲಕ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದೇವೆ. ನಮ್ಮ ಮನವಿಗೆ ಸ್ಪಂದಿಸಿ ಜಿಲ್ಲಾಧಿಕಾರಿ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರನ್ನು ಭೇಟಿ ಮಾಡಲಾಗುವುದು.
>
> **- ಪಿ.ಭೂಮೇಶ್, ರೈತ ಮುಖಂಡ**

> ಮೆಕ್ಕೆ ಜೋಳವನ್ನು ಬೆಂಬಲ ಬೆಲೆಯಡಿ ಖರೀದಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಅವರು ಆಹಾರ ಮತ್ತು ನಾಗರಿಕ ಸರಬರಾಜು ವ್ಯವಹಾರಗಳ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಸರ್ಕಾರದ ನಿರ್ಧಾರದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
>
> **- ಪಿ.ರಮೇಶ್‌ಕುಮಾರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ**

## ನಾಳೆ ಮಹಿಳೆಯರೇ ಅಭಿನಯಿಸಿದ ಕುರುಕ್ಷೇತ್ರ ನಾಟಕ ಪ್ರದರ್ಶನ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಲಕ್ಷ್ಮಿ ರಂಗನಾಥಸ್ವಾಮಿ ಮಹಿಳಾ ಕಲಾ ಸೌರಭ ಹಾಗು ಜಿಲ್ಲಾ ಕಲಾವಿದರ ಹಿತರಕ್ಷಣಾ ಸಮಿತಿ ವತಿಯಿಂದ ನ.16ರ ಮಧ್ಯಾಹ್ನ 2.30ಕ್ಕೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಹಿಳೆಯರೇ ಅಭಿನಯಿಸಿರುವ ಕುರುಕ್ಷೇತ್ರ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆಯೆಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಗುರುವಾರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪೌರಾಣಿಕ ನಾಟಕ ಅಭಿನಯಿಸುವವರು, ನೋಡುವವರು ಕಡಿಮೆ ಆಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕೆಲಸದ ಒತ್ತಡದ ನಡುವೆಯೂ ಮಹಿಳೆಯರೇ ಒಟ್ಟಾಗಿ ಅದರಲ್ಲೂ ಪೌರಾಣಿಕ ನಾಟಕ ಅಭಿನಯ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಕಲಾ ಸಂಘದ ಅಧ್ಯಕ್ಷೆ ಸಾವಿತ್ರಿ ಗಂಗಾಧರ್ ಅವರು ಮಾತನಾಡಿ, ಸ್ತ್ರೀಯರೇ ತರಬೇತಿ ಪಡೆದು ಅಭಿನಯ ಮಾಡುತ್ತಿದ್ದೇವೆ. ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹ ನೀಡಬೇಕು. ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತವಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆ ಮುಂಚೂಣಿಯಲ್ಲಿದ್ದಾಳೆ. ಅಂತೆಯೇ ನಾಟಕ ಕಲೆಯಲ್ಲೂ ನಮ್ಮ ಕಲಾವಂತಿಕೆ ಪ್ರದರ್ಶನ ಮಾಡಬೇಕು ಎಂಬ ಆಸೆಯಿಂದ ಈ ಪ್ರಯತ್ನ ಮಾಡಿದ್ದೇವೆ ಎಂದರು.

25 ಮಹಿಳೆಯರು ಪ್ರದರ್ಶನ ಮಾಡುತ್ತಿದ್ದೇವೆ. ಅದಕ್ಕಾಗಿ ಹಾರ್ಮೋನಿಯಂ ಮಾಸ್ಟರ್ ಪಾಲಾಕ್ಷಚಾರ್ ಅವರಿಂದ ಮೂರು ತಿಂಗಳಿಂದ ತರಬೇತಿ ಪಡೆದಿದ್ದು, ನಮಗೆ ಎಲ್ಲರೂ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಪಾತ್ರಧಾರಿಗಳಾದ ಶಶಿಕಲಾ, ಸಾವಿತ್ರಿ, ಶ್ವೇತಾ, ಜಿ.ಕುಮಾರ್, ಅನಿತಾ, ಕಾಮಾಕ್ಷಿ ಇದ್ದರು..

## ಬಿಹಾರದಲ್ಲಿ ಎನ್‌ಡಿಎಗೆ ಗೆಲುವಿನ ಹಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಪ್ರಚಂಡ ಬಹುಮತ ಸಾಧಿಸಿದೆ.

243 ಸ್ಥಾನಗಳಲ್ಲಿ 202 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಭಾರತೀಯ ಜನತಾ ಪಕ್ಷ ಶೇ. 95 ಸ್ಟ್ರೈಕ್ ರೇಟ್‌ನೊಂದಿಗೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಇದು ಅತ್ಯಂತ ಸೂಕ್ಷ್ಮ ರಾಜಕೀಯ ರಾಜ್ಯದಲ್ಲಿ ಚುನಾವಣಾ ರಣತಂತ್ರದ ಮೂಲಕ ಆಡಳಿತ ಮೈತ್ರಿಕೂಟದ ಮುಖವಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಮತ್ತು ಪ್ರಚಾರದ ಪ್ರಭಾವವನ್ನು ಪುನರುಚ್ಚರಿಸಿದೆ.




ಆರ್‌ಜೆಡಿ, ಕಾಂಗ್ರೆಸ್ ಮತ್ತು ಮೂರು ಎಡ ಪಕ್ಷಗಳನ್ನು ಒಳಗೊಂಡಿರುವ ಮಹಾಘಟಬಂಧನ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ತೇಜಸ್ವಿ ಯಾದವ್ ಅವರನ್ನು ಬಿಂಬಿಸಿದ್ದರೂ ಹೀನಾಯ ಸೋಲು ಅನುಭವಿಸಿದೆ. ವಿರೋಧ ಪಕ್ಷಗಳ ಮೈತ್ರಿಕೂಟವು 35 ಸ್ಥಾನ ಗೆಲ್ಲಲು ಪರದಾಡುವಂತಾಗಿದೆ.

ಬಿಜೆಪಿ ಸ್ಪರ್ಧಿಸಿದ 101 ವಿಧಾನಸಭಾ ಸ್ಥಾನಗಳಲ್ಲಿ 90ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ದೇಶದಲ್ಲಿ ಅತ್ಯಂತ ಪ್ರಬಲ ರಾಜಕೀಯ ಶಕ್ತಿಯಾಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಳ್ಳುವ ಸಾಧನೆಯಾಗಿದೆ. ಕಳೆದ ವರ್ಷದ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿ ಉಳಿಯಲು ಪಕ್ಷವು ಮಿತ್ರಪಕ್ಷಗಳನ್ನು ಅವಲಂಬಿಸಬೇಕಾಗಿ ಬಂದಿದ್ದರಿಂದ ಉಂಟಾಗಿರಬಹುದಾದ ಯಾವುದೇ ಹಿನ್ನಡೆಯನ್ನು ಇದು ಸರಿದೂಗಿಸುತ್ತದೆ. ದೆಹಲಿ, ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಬಿಜೆಪಿ ಸತತ ಎರಡು ಬಾರಿ ಅದ್ಭುತ ಪ್ರದರ್ಶನ ನೀಡಿದ ಹಿನ್ನೆಲೆಯಲ್ಲಿ ಬಿಹಾರದಲ್ಲಿ ಎನ್‌ಡಿಎಯ ಸಂಖ್ಯೆ ಹೆಚ್ಚಾಗಿದೆ.

ಮುಖ್ಯಮಂತ್ರಿ ನಿತೀಶ್ ಕುಮಾರ್‌ಗೆ ಮೋದಿ ಮತ್ತು ಅವರ ಸಚಿವರು ನೀಡಿದ ದೃಢ ಬೆಂಬಲವು ಜೆಡಿಯುಗೆ ಉತ್ತಮ ಲಾಭಾಂಶ ನೀಡಿದೆ. 2020ರಲ್ಲಿ ಕೇವಲ 43 ಸ್ಥಾನಗಳನ್ನು ಗೆದ್ದಿದ್ದ ಜೆಡಿಯು ಈಗ 83 ಸ್ಥಾನಗಳಲ್ಲಿ ಮುನ್ನಡೆ ಸಾಧಿಸುತ್ತಿದೆ. ಇನ್ನು ಸ್ವಯಂ ಘೋಷಿತ ಪ್ರಧಾನಿ ಮೋದಿಯ ಬಂಟ ಟಿಹನುಮಾನ್‌ಟಿ, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ನೇತೃತ್ವದ ಲೋಕ ಜನಶಕ್ತಿ ಪಕ್ಷ-ರಾಮ್ ವಿಲಾಸ್ ಪಕ್ಷವು 28 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು 19ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ.

### ಸರ್ಕಾರ ರಚಿಸಲು 122 ಸ್ಥಾನ ಬೇಕು

ಚುನಾವಣಾ ಆಯೋಗದ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮಗಳ ಆರೋಪದ ನಡುವೆ ಎರಡು ಹಂತಗಳಲ್ಲಿ ನಡೆದ ಬಿಹಾರ ಚುನಾವಣೆಯಲ್ಲಿನ ಗೆಲುವು ಕೂಡ ಮಹತ್ವದ್ದಾಗಿದೆ. ಏಕೆಂದರೆ ಮುಂದಿನ ಆರು ತಿಂಗಳಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ವಿಧಾನಸಭಾ ಚುನಾವಣೆಗಳಿಗೆ ಮುನ್ನುಡಿಯಾಗಿ ಅನೇಕರು ಇದನ್ನು ನೋಡುತ್ತಾರೆ.

## ಮಾಜಿ ಶಾಸಕ ಪ್ರೀತಂ ಗೌಡರ ಹುಟ್ಟುಹಬ್ಬ ಆಚರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಾಜಿ ಶಾಸಕ ಹಾಗೂ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ. ಗೌಡ ಅವರ ಹುಟ್ಟುಹಬ್ಬವನ್ನು ಶುಕ್ರವಾರ ಜನಪರ ಕಾರ್ಯಕ್ರಮಗಳ ಮೂಲಕ ಬಿಜೆಪಿ ಕಾರ್ಯಕರ್ತರು ಹಾಗೂ ಪ್ರೀತಂ ಗೌಡ ಅಭಿಮಾನಿಗಳು ಆಚರಿಸಿದರು.

ನಗರದ ಸೀತಾರಾಮಾಂಜನೇಯ ದೇವಾಲಯದಲ್ಲಿ ಬೆಳಿಗ್ಗೆಯಿಂದ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಆಗಮಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ತಮ್ಮ ನಾಯಕರು ರಾಜಕೀಯವಾಗಿ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದರು.

ಪ್ರೀತಂ ಗೌಡ ಅವರ ತಂದೆ-ತಾಯಿ, ಕುಟುಂಬದ ಸದಸ್ಯರು ಮತ್ತು ಪ್ರಮುಖ ಮುಖಂಡರ ಸಮ್ಮುಖದಲ್ಲಿ ವಿಶೇಷ ಪೂಜೆ ಮತ್ತು ಆಶೀರ್ವಚನಗಳೊಂದಿಗೆ ಕಾರ್ಯಕ್ರಮ ಆರಂಭಗೊಂಡವು. ಪೂಜೆ ಬಳಿಕ ಸಿಹಿತಿನಿಸು ವಿತರಣೆ, ಪಟಾಕಿ ಸಿಡಿಸುವ ಮೂಲಕ ಜನ್ಮದಿನೋತ್ಸವಕ್ಕೆ ಭಕ್ತಿಯ ಜೊತೆ ಹರ್ಷದ ಮೆರಗು ಕೂಡ ದೊರೆಯಿತು.

ಹುಡಾ ಮಾಜಿ ಅಧ್ಯಕ್ಷ ಲಲಾಟ್ ಮೂರ್ತಿ, ಬಿಜೆಪಿ ನಗರಾಧ್ಯಕ್ಷ ಯೋಗೇಶ್ ಗೌಡ ಹಾಗೂ ಮುಖಂಡ ಶ್ರೀಕಾಂತ್ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರೀತಂ ಗೌಡ ಅವರ ಸೇವಾ ಮನೋಭಾವ, ದೃಢ ನಿಲುವು ಮತ್ತು ಅಭಿವೃದ್ಧಿ ದೃಷ್ಟಿಕೋನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ದೇವಾಲಯದಲ್ಲಿ ವಿಶೇಷ ಪೂಜೆ ಮಾಡುವುದು ನಮ್ಮ ಗೌರವ. ಅವರು ರಾಜಕೀಯವಾಗಿ ಮತ್ತಷ್ಟು ಶಕ್ತಿಯುತರಾಗಿ ರಾಜ್ಯ ಮಟ್ಟದಲ್ಲಿ ಪ್ರಮುಖ ಪಾತ್ರ ವಹಿಸಲಿ ಎಂದು ಎಲ್ಲರೂ ಪ್ರಾರ್ಥಿಸಿದ್ದೇವೆ ಎಂದು ಹೇಳಿದರು.

ಪ್ರೀತಂ ಗೌಡ ಶಾಸಕ ಸ್ಥಾನದಲ್ಲಿದ್ದಾಗ ಮಾಡಿದ ಕೆಲಸಗಳು ಹಾಸನದ ಅಭಿವೃದ್ಧಿ ವೇಗ ಹೆಚ್ಚಿಸಿದ್ದವು.

2028ರಲ್ಲಿ ಅವರು ಮತ್ತೆ ಸ್ಪರ್ಧಿಸಿ ಶಾಸಕರಾಗಿ ತಾಲೂಕು ಮತ್ತು ನಗರವನ್ನು ಮತ್ತಷ್ಟು ಪ್ರಗತಿ ಪಥದತ್ತ ಕೊಂಡೊಯ್ಯಲಿ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜನ್ಮದಿನವನ್ನು ಕೇವಲ ಆಚರಣೆಗಷ್ಟೇ ಸೀಮಿತಗೊಳಿಸದೆ, ಸಮಾಜಮುಖಿ ಕಾರ್ಯಗಳ ಮೂಲಕ ಅರ್ಥಪೂರ್ಣಗೊಳಿಸಲಾಯಿತು. ಪೌರಕಾರ್ಮಿಕರು ಮತ್ತು ನಗರದ ವಾಹನ ಚಾಲಕರಿಗೆ ಸಮವಸ್ತ್ರ ವಿತರಣೆ ಮಾಡಿ, ಗೌರವ ಸೂಚಿಸಲಾಯಿತು. ಅಲ್ಲದೆ ವಿವಿಧೆಡೆ ಅನ್ನ ದಾಸೋಹ ಹಮ್ಮಿಕೊಳ್ಳಲಾಗಿದ್ದು, ನೂರಾರು ಜನರು ಇದರ ಸದುಪಯೋಗ ಪಡೆದುಕೊಂಡರು.

ಬೈಕ್ ರ್‍ಯಾಲಿ ಮೂಲಕ ಬಂದ ಯುವಕರ ತಂಡಗಳು, ಮಹಿಳಾ ಕಾರ್ಯಕರ್ತರು, ಅಭಿಮಾನಿಗಳು ಪ್ರೀತಂ ಗೌಡರ ಕಟೌಟ್‌ಗಳಿಗೆ ಹೂವಿನ ಅಲಂಕಾರ ಮಾಡಿ, ಸಿಹಿ ಹಂಚಿ ಹರ್ಷ ವ್ಯಕ್ತಪಡಿಸಿದರು.

## ರಸ್ತೆ ಬದಿ ಕಸ ಸುರಿದ ವ್ಯಕ್ತಿಗೆ ಸ್ವಚ್ಛತೆಯ ಪಾಠ ಮಾಡಿದ ಪುರಸಭೆ ಸಿಬ್ಬಂದಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣದ ಹಳೇಬೀಡು ರಸ್ತೆ ಬದಿ ಕಸ ಸುರಿದ ಸಾರ್ವಜನಿಕರನ್ನು ಪುರಸಭೆ ಸಿಬ್ಬಂದಿ ತೀವ್ರ ತರಾಟೆಗೆ ತೆಗೆದುಕೊಂಡರು.

ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಬದಿ ಮತ್ತು ನಾಲೆಗೆ ಕಸ ಸುರಿಯುತ್ತಿರುವುದನ್ನು ಖಚಿಪಡಿಸಿಕೊಂಡು ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ ತಪ್ಪಿತಸ್ಥರಿಗೆ ಸ್ವಚ್ಛತೆಯ ಪಾಠ ಮಾಡಿದರು. ಬೆಂಗಳೂರಿನಲ್ಲಿ ರಸ್ತೆಗೆ ಕಸ ಸುರಿದವರ ಮನೆ ಮುಂದೆಯೇ ತ್ಯಾಜ್ಯ ಸುರಿದು ದಂಡ ವಿಧಿಸಲಾಗಿತ್ತು. ಇನ್ನು ಮುಂದೆಯೂ ಇದೇ ಪ್ರವೃತ್ತಿ ಮುಂದುವರಿದರೆ ತಾವೂ ಸಹ ಅದೇ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪುರಸಭಾ ಆರೋಗ್ಯ ನಿರೀಕ್ಷಾಧಿಕಾರಿ ಲೋಹಿತ್ ಮಾತನಾಡಿ, ಪಟ್ಟಣದಲ್ಲಿ ಸ್ವಚ್ಛತೆ ಕಾಪಾಡಲು ಪುರಸಭೆ ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಾರೆ. ಬಂಟೇನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಸವನ್ನು ರಸ್ತೆಗೆ ಸುರಿಯುತ್ತಿರುವುದು ಶೋಚನೀಯ. ಈ ಬಗ್ಗೆ ಎಚ್ಚರಿಕೆ ನೀಡಿದರೂ ಕೂಡ ಕೆಲವರು ರಾತ್ರಿ ವೇಳೆ ಕಸ ಸುರಿಯುತ್ತಿದ್ದಾರೆ. ವ್ಯಕ್ತಿಯೊಬ್ಬ ಬೈಕ್‌ನಲ್ಲಿ ಕಸ ಸುರಿಯುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದು ತಿಳವಳಿಕೆ ನೀಡಿ ಎಚ್ಚರಿಕೆ ನೀಡಲಾಗಿದೆ. ವಿದ್ಯಾವಂತರೇ ಅನಾಗರಿಕರಂತೆ ವರ್ತಿಸುತ್ತಿದ್ದಾರೆ ಎಂದರು.

### ಪಟ್ಟಣದ ಸೌಂದರ್ಯಕ್ಕೆ ಧಕ್ಕೆ

ಐತಿಹಾಸಿಕ ಚನ್ನಕೇಶವ ದೇವಸ್ಥಾನ ಇರುವ ಬೇಲೂರು ಪಟ್ಟಣಕ್ಕೆ ನಿತ್ಯ ನೂರಾರು ಪ್ರವಾಸಿಗರು ಬರುತ್ತಾರೆ. ರಾಜ್ಯ ಮಾತ್ರವಲ್ಲದೆ ವಿದೇಶಗಳಿಂದಲೂ ಸಾರ್ವಜನಿಕರು ಆಗಮಿಸುತ್ತಾರೆ. ಪಟ್ಟಣದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ಪುರಸಭೆಗೆ ಸವಾಲಿನ ಕೆಲಸವಾಗಿದೆ. ಅಧಿಕಾರಿಗಳ ಮುತುವರ್ಜಿಯಿಂದಾಗಿ ಪೌರ ಕಾರ್ಮಿಕರು ಶಕ್ತಿ ಮೀರಿ ಶ್ರಮಿಸುತ್ತಿದ್ದು ಪಟ್ಟಣದ ಪರಿಸರ ಕಾಪಾಡುತ್ತಿದ್ದಾರೆ. ಆದರೆ ಅದ್ಯಾವುದರ ಪರಿವೇ ಇಲ್ಲದಂತೆ ಕೆಲವರು ರಸ್ತೆಗೆ ಕಸ ಸುರಿದು ಸೌಂದರ್ಯ ಹಾಳುಗೆಡವುತ್ತಿದ್ದಾರೆ. ಪುರಸಭೆಯ 23 ವಾರ್ಡ್‌ಗಳಲ್ಲೂ ಸ್ವಚ್ಛತೆಗೆ ಕ್ರಮ ವಹಿಸಲಾಗಿದೆ. ನಿತ್ಯ ಪೌರಕಾರ್ಮಿಕರು ಪಟ್ಟಣವನ್ನು ಸ್ವಚ್ಛಗೊಳಿಸಿದ ಬಳಿಕ ಕಸವನ್ನು ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ರವಾನಿಸುತ್ತಾರೆ. ಪ್ರತಿ ಮನೆಯಿಂದ ಒಣ ಮತ್ತು ಹಸಿ ಕಸ ಬೇರ್ಪಡಿಸಿ ವಾಹನಗಳ ಮೂಲಕ ತೆಗೆದುಕೊಂಡು ಹೋಗಲಾಗುತ್ತದೆ. ವಿಲೇವಾರಿ ಮಾಡಿದ ಬಳಿಕ ವೈಜ್ಞಾನಿಕವಾಗಿ ಕಸವನ್ನು ಸಾವಯುವ ಗೊಬ್ಬರವಾಗಿ ಪರಿವರ್ತಿಸಲಾಗುತ್ತದೆ. ಇಂತಹ ಮಹತ್ವಪೂರ್ಣ ಕೆಲಸಗಳನ್ನು ಪುರಸಭೆ ಸ್ವಚ್ಛತೆ ಹಿತದೃಷ್ಟಿಯಿಂದ ಕೈಗೊಂಡಿದೆ. ಕೆಲವರು ರಾತ್ರೋ ರಾತ್ರಿ ತಮ್ಮ ಮನೆಯಲ್ಲಿನ ರಾಶಿ ರಾಶಿ ಕಸವನ್ನು ಪುರಸಭೆಗೆ ವಾಹನಗಳಿಗೆ ನೀಡದೆ ಬೈಕ್‌ಗಳಲ್ಲಿ ಬಂದು ರಸ್ತೆ ಬದಿಯಲ್ಲಿ ಸುರಿಯುತ್ತಿರುವುದು ಖಂಡನೀಯ.

### ಬೀದಿ ನಾಯಿಗಳ ಉಪಟಳ ಅಧಿಕ

ರಸ್ತೆ ಬದಿ ಕಸ ಸುರಿಯುತ್ತಿರುವುದರಿಂದ ದುರ್ನಾತ ಬೀರುತ್ತಿರುವುದು ಮಾತ್ರವಲ್ಲದೆ ಸಾಂಕ್ರಾಮಿಕ ರೋಗಗಳ ಭೀತಿಯೂ ಸ್ಥಳೀಯರನ್ನು ಕಾಡುತ್ತಿದೆ. ಇನ್ನು ಮಾಂಸದಂಗಡಿ, ಹೋಟೆಲ್‌ಗಳ ತ್ಯಾಜ್ಯ ಸುರಿಯುತ್ತಿರುವುದರಿಂದ ಆಹಾರ ಅರಸಿ ಬರುವ ಬೀದಿ ನಾಯಿಗಳು ಕಸವನ್ನು ಚೆಲ್ಲಾಪಿಲ್ಲಿ ಮಾಡುತ್ತವೆ. ರಸ್ತೆಯ ಮಧ್ಯ ಭಾಗಕ್ಕೆ ತ್ಯಾಜ್ಯ ಬಿಸಾಡುವುದರಿಂದ ವಾಹನ ಸವಾರರು, ಪಾದಚಾರಿಗಳು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಪುರಸಭೆ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ನವೆಂಬರ್-15

1533: ಸ್ಪಾನಿಷ್ ವೀರ ಯೋಧ ಫ್ರಾನ್ಸಿಸ್ಕೋ ಪಿಜಾರೋ, ಇಂಕಾ ಸಾಮ್ರಾಜ್ಯದ ಚಕ್ರವರ್ತಿ ಅಟಾಹುಲ್ಪಾಳನ್ನು ಬಂಧಿಸಿದರು.

1889: ಬ್ರೆಝಿಲ್‌ನಲ್ಲಿ ಗಣರಾಜ್ಯ ಸ್ಥಾಪನೆ, ರಾಜತಂತ್ರಕ್ಕೆ ಅಂತ್ಯ.

1920: ಸ್ವಿಟ್ಜರ್‌ಲ್ಯಾಂಡ್‌ನ ಜೆನೆವಾ ನಗರವು ಅಂತಾರಾಷ್ಟ್ರೀಯ ರಾಷ್ಟ್ರಗಳ ಲೀಗ್‌ನ ಮುಖ್ಯಸ್ಥಳವಾಯಿತು.

1971: ಇಂಟೆಲ್ ಕಂಪನಿಯು ವಿಶ್ವದ ಮೊದಲ ಮೈಕ್ರೋಪ್ರೊಸೆಸರ್ ಅನ್ನು ಬಿಡುಗಡೆ ಮಾಡಿತು. ಅದು ಆಧುನಿಕ ಕಂಪ್ಯೂಟಿಂಗ್‌ಗೆ ಪುನರುತ್ಥಾನದ ದಿನ.

1854: ಹಿಂದು ಕಾಲೇಜು ಎಂಬ ಹೆಸರಿನಲ್ಲಿ ನಂತರದ ಪ್ರಸಿದ್ಧ ಪ್ರೆಸಿಡೆನ್ಸಿ ಕಾಲೇಜು (ಕೋಲ್ಕತ್ತಾ) ಸ್ಥಾಪನೆ.

1959: ಪ್ರಸಿದ್ಧ ಲೇಖಕ ಮತ್ತು ಪುರಸ್ಕೃತ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ ಅವರ ಕಾರ್ಟೂನ್ ಟೈಮ್ಸ್ ಆಫ್ ಇಂಡಿಯಾಯಲ್ಲಿ ಮೊದಲ ಬಾರಿ ಪ್ರಕಟ.

1989: ಭಾರತದ ಮೊದಲ ಸ್ವದೇಶಿ ಯುದ್ಧ ನೌಕೆ ಗೋದಾವರಿ ಸೇವೆಗೆ ಸೇರ್ಪಡೆ.

#### ಜನನ

1967: ಭಾರತದ ಮಾಜಿ ಕ್ರಿಕೆಟ್ ಆಟಗಾರ ವಿಕ್ರಂ ರಾಥೋಡ್

#### ಮರಣ


1982: ಭಾರತಇಸ್ರೇಲ್ ರಾಜತಾಂತ್ರಿಕ ಸಂಬಂಧ ಸುಧಾರಣೆಗೆ ಕಾರಣವಾದ ರಾಯಭಾರಿ ಎಂ.ಕೆ. ಭದ್ರಕುಮಾರ್

## ಮುಳುಗಡೆ ಹಳ್ಳಿಯ ಬದುಕಿನ ತಲ್ಲಣಗಳು

**- ಗೊರೂರು ಅನಂತರಾಜು, ಹಾಸನ**

ಗೊರೂರಿನ ಬಳಿ ಹೇಮಾವತಿ ನದಿಗೆ ಅಣೆಕಟ್ಟೆ ಕಟ್ಟಿದಾಗ ಮುಳುಗಡೆಯಾದ ಗ್ರಾಮ ಉಲಿವಾಲ. ಈ ಗ್ರಾಮದ ಲೇಖಕರು ಮೋಹನ್‌ಕುಮಾರ್ ತಮ್ಮ ಬಾಲ್ಯದ ನೆನಪುಗಳನ್ನು ಹೆಕ್ಕಿ ತೆಗೆದು ನಿರೂಪಿಸಿರುವ ಮುಳುಗಿದ್ದೆಲ್ಲಾ ಕಥೆಯೆಲ್ಲ ಕೃತಿ ಸಹಜವಾಗಿಯೇ ನನ್ನ ಓದಿನ ಕುತೂಹಲ ಹೆಚ್ಚಿಸಿತ್ತು. ನಾನು ಹುಟ್ಟಿ ಬೆಳೆದು 45 ವರ್ಷ ಕಳೆದ ಊರು ಗೊರೂರು ಇದಕ್ಕೆ ಕಾರಣವಾಗಿತ್ತು. ಉಲಿವಾಲ ಅರಕಲಗೂಡು ತಾಲ್ಲೂಕಿಗೆ ಸೇರಿದ ಗ್ರಾಮ. ಇದು ಹೇಮಾವತಿ ಡ್ಯಾಂನಿಂದ ಮುಳುಗಡೆಯಾಗಿದೆ. ಮುಳುಗಡೆಗೂ ಮೊದಲು 150 ಕುಟುಂಬಗಳು ಇಲ್ಲಿ ವಾಸವಿದ್ದವು. ಊರು ಮುಳುಗಡೆಯಾದ ಸಂದರ್ಭ ಸ್ಮರಿಸುತ್ತಾ ಲೇಖಕರು ಹೇಮಾವತಿ ಡ್ಯಾಂ ನಿರ್ಮಾಣಗೊಂಡು ಜಲಾಶಯಕ್ಕೆ ನೀರು ಹರಿವಿನ ಪ್ರಮಾಣ ಜಾಸ್ತಿಯಾಗಿತ್ತು. ಪ್ರಥಮ ಬಾರಿಗೆ ಅಣೆಕಟ್ಟೆಗೆ ನೀರು ತುಂಬಿಸತೊಡಗಿದರು. ಪ್ರತಿದಿನ ನೀರು ಶೇಖರಣೆಗೊಳ್ಳುತ್ತಾ ಬರುತ್ತಿತ್ತು. ಅಷ್ಟೊತ್ತಿಗಾಗಲೇ ನಾವು ವಾಸವಿದ್ದ ಊರು ಹಾಳು ಗೋಡೆಗಳನ್ನು ಹೊಂದಿತ್ತು. ಅಲ್ಲೇ ಅಲ್ಪ ಸ್ವಲ್ಪ ಜಮೀನು ಮುಳುಗಡೆಯಾಗದೆ ಉಳಿದವರು ಊರಿನಿಂದ ಮೇಲೆ ಬಂದು ಮನೆ ಕಟ್ಟಿಕೊಂಡು ವಾಸವಿದ್ದ 20 ಕುಟುಂಬಗಳು ನಮ್ಮದು ಒಂದು. ನಾವು ಕಾಣಕಾಣುತ್ತಿದ್ದಂತೆ ಪ್ರಥಮ ಬಾರಿಗೆ ಉಲಿವಾಲದ ಊರಿನೊಳಗೆ ಬರಲಾರಂಭಿಸಿತು. ತಗ್ಗು ಪ್ರದೇಶದಲ್ಲಿದ್ದ ಮನೆಗಳು ಮುಳುಗತೊಡಗಿದರೆ ಊರ ಮೇಲ್ಭಾಗದಲ್ಲಿದ್ದ ನಮ್ಮ ಮನೆಗಳ ಮಣ್ಣಿನ ಗೋಡೆಗಳು ನೆನೆಯತೊಡಗಿದವು. ನೋಡನೋಡುತ್ತಲೇ ನಾವು ವಾಸವಿದ್ದ ಮನೆಗಳು ನೀರಿನಲ್ಲಿ ಮಾಯವಾದವು. ಅಜ್ಜಿ ಅಯ್ಯೋ ನಮ್ಮ ಕಣ್ಮುಂದೇನೆ ಬಾಳಿ ಬದುಕಿದ ಮನೆಗಳು ನೀರಲ್ಲಿ ಮುಳುಗಿಹೋಗ್ತಾವಲ್ಲ. ನಾವು ಇಲ್ಲಿ ಓಡಾಡುತ್ತಿದ್ದೆವು. ಇಲ್ಲಿ ಮಲಗುತ್ತಿದ್ದೆವು. ಇಲ್ಲಿ ಒಳಕಲ್ಲಿತ್ತು. ಇಲ್ಲಿ ಬಚ್ಚಲು ಮನೆಯಿತ್ತು. ನಮ್ಮ ಕಣ್ಣೆದುರಿಗೆ ನುಂಗಿ ನೀರು ಕುಡಿಯುತ್ತಿದೆಯಲ್ಲೇ ತಾಯಿ.

ಯಾಕಜ್ಜಿ ಅಳ್ತಿ ಎಂದು ಮೊಮ್ಮಗ ಮೋನ ಕೇಳಿದರೆ ಈ ಮನೆಯಲ್ಲಿ ನಿಮ್ಮ ಮುತ್ತಾತ, ತಾತ, ನಿಮ್ಮಪ್ಪ, ಚಿಕ್ಕಪ್ಪಂದಿರು ಹುಟ್ಟಿ ಬದುಕು ನಡೆಸಿದ ಜಾಗ. ಇಡೀ ನಮ್ಮ ವಂಶ ಬೆಳೆದಾಡಿದ ಜಾಗ ಮುಳುಗುತ್ತಿದೆ. ನಮ್ಮ ಬದುಕನ್ನೆಲ್ಲಾ ಮುಳುಗಿಸುತ್ತಿದೆ ಎಂದು ಪುಟ್ಟಜ್ಜಿಯ ಬಾಯಿಂದ ನೋವು ಹೇಳಿಸುವ ಕತೆಗಾರರು ಪುಟ್ಟಜ್ಜಿಯ ಪಾತ್ರವನ್ನು ಕೇಂದ್ರವಾಗಿ ತಮ್ಮ ಬಾಲ್ಯದ ಕತೆ ನಿರೂಪಿಸಿದ್ದಾರೆ. ಆ ಕಾಲಘಟ್ಟದಲ್ಲಿ ಹೇಮಾವತಿ ನದಿಗೆ ಅಣೆಕಟ್ಟು ಪ್ರಾರಂಭವಾಗಿ ಮುಳುಗಡೆಯಾಗುತ್ತಿದ್ದ ಊರಿನ ಸಂಕಟ ಆನಂದಗಳನ್ನು ಹೇಳುತ್ತಿದ್ದ ಅಜ್ಜಿ ಈಗಿಲ್ಲ. ಆದರೆ ಅಜ್ಜಿಯ ಮನದೊಳಗಿನ




ಅಂತ:ಕರಣ ಎದೆಗಾರಿಕೆ ಅವಳ ನಿಲುವುಗಳ ಕಾಲು ಭಾಗವನ್ನು ಮಾತ್ರ ಇಲ್ಲಿ ಬರೆಯಲು ಸಾಧ್ಯವಾಗಿದೆ ಎನ್ನುತ್ತಾರೆ. ಎಂತಹ ಕಡು ಕಷ್ಟದಲ್ಲೂ ಧೈರ್ಯದಿಂದ ಕಾರ್ಯನಿರತವಾಗುವ ಊರಿನ ಯಾರೇ ಆಗಿರಲಿ ತಪ್ಪು ಹಾದಿಯಲ್ಲಿದ್ದರೆ ಗದರಿಸಿ ತಿದ್ದಿ ಸರಿದಾರಿಗೆ ತರುವ ಮಕ್ಕಳಿಗೆ ಜನಪದ ಕಥೆಗಳನ್ನು ಹೇಳುತ್ತಾ ಕುಟುಂಬಕ್ಕಷ್ಟೇ ಅಲ್ಲ ಊರಿಗೆಲ್ಲಾ ಜೀವಂತಿಕೆ ತುಂಬುವ ಪುಟ್ಟಜ್ಜಿಯ ಪಾತ್ರದೊಂದಿಗೆ ವಿಂಳಿತವಾಗುವ ವಿಂಡಿಚಲು, ದನಕರುಗಳೊಂದಿಗೆ ಸಂಭ್ರಮಿಸುವ ದೀಪಾವಳಿ, ಬಂಡಿ ಹಬ್ಬ, ಜನಪದರ ಹಾಡು ಪಾಡು ಹೀಗೆ ಬದುಕಿನ ಎಲ್ಲವೂ ಇಲ್ಲಿ ಹಾಸುಹೊಕ್ಕಾಗಿವೆ. ನಮ್ಮ ಅಜ್ಜಿ ಪುಟ್ಟಮ್ಮನವರ ತಂದೆ ರಂಗೇಗೌಡರು. ಅವರನ್ನು ಹೆಚ್ಚಾಗಿ ಊರಿನವರು ತೋಟದ ರಂಗಪ್ಪ ಅಂತಲೇ ಕರೀತಿದ್ರು. ಪೊನ್ನಾಥಪುರ ದಾಖ್ಲೆ ದಾಸೇಗೌಡನ ಕೊಪ್ಪಲು ಇವರ ಸ್ವಗ್ರಾಮ. ಇವರ ಹೆಂಡತಿ ಕಳ್ಳಿಕೊಪ್ಪಲು ರಂಗಮ್ಮ. ಇವರಿಗೆ ಏಳು ಗಂಡು ಮೂರು ಹೆಣ್ಣು. ಇವರ ಪೈಕಿ ಹೆಚ್ಚು ಓದಿದವರೆಂದರೆ ಸ್ವಾಮಿಗೌಡರು. ಕನ್ನಡ ಪಂಡಿತ ಸ್ವಾಮಿಗೌಡರೆಂದೇ ಖ್ಯಾತಿ. ಇವರು (ಗೊರೂರು ಅನಂತರಾಜು) ನನಗೆ ಪರಿಚಿತ ಹಿರಿಯ ಸಾಹಿತಿಗಳಾಗಿದ್ದು ಇವರ ಕತ್ತರಿಘಟ್ಟ ಹರಿಸೇವೆ ಕೃತಿಯಲ್ಲಿ 28 ಮುಳುಗಡೆ ಗ್ರಾಮಗಳು ಸೇರಿ ಆಚರಿಸುತ್ತಿದ್ದ ಜಾತ್ರೆ ವೈಶಿಷ್ಟತೆ ಇದೆ).

ಹೇಮಾವತಿ ಹೊಳೆಗೆ ಯಗಚಿ ಹೊಳೆ ಹೇಳ್ತಂತೆ ನಾನು ಹೆಣ ತರ್ತೀನಿ, ನೀನು ಕೊಂಡು (ಸೌದೆ) ತಗೊಂಡು ಬಾ. ನಾವಿಬ್ರು ಸೇರ್ಕೊಂಡು ರಾತ್ರಿ ಇಲ್ಲೇ ಹೆಣ ಬೇಯ್ಸಿ ಕೊಂಡು ತಿನ್ನೋಣ.. ಮಳೆಗಾಲದಲ್ಲಿ ಸಕಲೇಶಪುರದ ದಟ್ಟ ಕಾಡುಗಳಿಂದ ಮರಗಳು ಹೇಮಾವತಿ ನದಿಯಲ್ಲಿ ತೇಲಿ ಬರುವುದು ಸಹಜವಾಗಿತ್ತು. ಗೊರೂರಿನಲ್ಲಿ ನದಿಯ ದಡದಲ್ಲಿ ಹೆಣಗಳನ್ನು ಸುಡುತ್ತಿದ್ದರು ಮತ್ತು ಹೂಳುತ್ತಿದ್ದರು. ಹೀಗಾಗಿ ನಾವು ಮಕ್ಕಳು ಹೊಳೆಯ ಕಡೆ ಹೋಗಬಾರದೆಂದು ಹಿರಿಯರು ಹೀಗೆ ಕಥೆ ಕಟ್ಟಿರಬಹುದೇನೋ..? ಗೊರೂರು ಡ್ಯಾಂ ಪ್ರಾರಂಭವಾಯಿತು. ಸಣ್ಣಸಣ್ಣ ಗುಡ್ಡಗಳು, ಕಲ್ಲು ಬಂಡೆಗಳು ಚೂರಾಗ ತೊಡಗಿದವು. ಸದಾ ನಿಶ್ಯಬ್ದವಾಗಿದ್ದ ಉಲಿವಾಲ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಲಾರಿಗಳು, ಬುಲ್ಡೋಜರ್‌ಗಳು, ಬಂಡೆ ತೂತು ಕೊರೆಯುವ ಯಂತ್ರಗಳ ಶಬ್ದಗಳು ಪ್ರಾರಂಭವಾದವು. ಊರ ಜನ ಆ ಶಬ್ಧವನ್ನು ಮಾತ್ರವಲ್ಲ ಅವುಗಳ ಕೆಲಸಗಳನ್ನು ನೋಡಿ ಮೂಕವಿಸ್ಮಿತರಾಗುತ್ತಿದ್ದರು. ಕಾಣ ಕಾಣುತ್ತಿದ್ದಂತೆ ನಮ್ಮ ಭೂಮಿಗಳಲ್ಲಿದ್ದ ಕಲ್ಲು, ಮಣ್ಣುಗಳೆಲ್ಲವೂ ಡ್ಯಾಮಿನೊಳಗೆ ಸೇರುತ್ತಾ ಮಾಯವಾಗುತ್ತಿದ್ದರೆ, ಬರುಬರುತ್ತಾ ನಮ್ಮ ಕಾವಲುಗದ್ದೆ, ಅಮ್ಮನಗುಡಿ ಕಾವಲು ನಂತರ ಉಲಿವಾಲದ ಹತ್ತಿರ ಬಂದು ನಮ್ಮ ಜಾಗದ ಮಣ್ಣನ್ನು ಬುಲ್ಡೋಜರ್‌ಗಳು ಅಗೆಯುವಾಗ ಪುಟ್ಟಜ್ಜಿ ಅಯ್ಯೋ ನಮ್ಮ ಬದುಕನ್ನೆಲ್ಲಾ ಅಗೆದು ಡ್ಯಾಮಿಗೆ ಸೇರಿಸ್ತರಲ್ಲಪ್ಪ ಅಂತ ತನ್ನ ದೇಹದ ಅಂಗ ಒಂದನ್ನು ಕತ್ತರಿಸುತ್ತಿದ್ದಾರೇನೋ ಎಂಬಂತೆ ನೋವನ್ನು ಅನುಭವಿಸುತ್ತಿತ್ತು..ಎನ್ನುತ್ತಾರೆ. ಕೋಟೆಕೊರದ ಹತ್ತಿರ ಬಾಲಾಜಿ ಕಂಪನಿ ತಲೆ ಎತ್ತಿತು. ನೂರಾರು ವಾಹನಗಳು ಬಂದು ನಿಂತವು. ಆಂದ್ರ ತಮಿಳುನಾಡಿನ ಕೂಲಿ ಕಾರ್ಮಿಕರಿಗೆ ಗುಡಿಸಲೋಪಾದಿಯ ಮನೆಗಳು ನಿರ್ಮಾಣವಾದವು.. ಸುಮಾರು 30 ಅಡಿ ಯಷ್ಟು ಡ್ಯಾಂ ಆಗಿತ್ತು. ಕೆಳಭಾಗದಿಂದ ಮೇಲ್ಭಾಗಕ್ಕೆ ಹೋಗಲು ಸಾರ್ವೆ ಹಾಕಿಕೊಂಡಿದ್ದರು. ಎರಡು ಜನ ಮುಂದೆ ಒಬ್ಬ ಹಿಂದೆ ಒಬ್ಬ ಮಧ್ಯದಲ್ಲಿ ನೊಗದಂತೆ ಬಡಿಹಾಕಿ ಅದರ ಮಧ್ಯ ದಪ್ಪ ದಪ್ಪ ಹಗ್ಗದಿಂದ ದಪ್ಪ ದಪ್ಪದ ಕಲ್ಲುಗಳನ್ನು ಕಟ್ಟಿಕೊಂಡು ಹೊರುತ್ತಿದ್ದರು. ಬರೀ ಕಚ್ಚೆ ಪಂಚೆ. ಮೈಮೇಲೆ ಶರ್ಟ್ ಇರುತ್ತಿರಲಿಲ್ಲ. ಕಪ್ಪು ಸದೃಢ ದೇಹದವರು ಮೇಲ್ಭಾಗಕ್ಕೆ ಕಲ್ಲು ಹೊತ್ತು ಹೋಗುತ್ತಿದ್ದರು. ಬದುಕಿನ ಬಂಡಿ ನಡೆಸಲು ಅವರು ಪಡುತ್ತಿದ್ದ ಕಷ್ಟಗಳನ್ನು ನೋಡಿದರೆ ಕರುಳು ಚುರುಕ್ ಎನ್ನುತ್ತಿತ್ತು. ಇಂತಹ ದೃಶ್ಯಗಳನ್ನು ನಾವು ನೋಡಿದ್ದೆವು.

ಲೇಖಕರು ಬರೆದಂತೆ ಗೊರೂರು ಡ್ಯಾಂನಿಂದ ಮುಳುಗಡೆಯಾದ ಉಲಿವಾಲದ ಗ್ರಾಮದ ನೋವು ನಲಿವುಗಳೆಲ್ಲಾ ಇದೇ ಡ್ಯಾಂನಿಂದ ಮುಳುಗಡೆಯಾದ ಅನೇಕ ಗ್ರಾಮಗಳ ಜೀವನದ ಕಥೆಗಳೂ ಆಗಿದ್ದಿರಬಹುದು. ಮುಳುಗಡೆಯಿಂದ ಹಲವಾರು ಹಿರಿಯರ ನೆನಪುಗಳು, ತುಮುಲಗಳಾಚೆ ಗೊರೂರಿನಿಂದ ಹಾಸನ ಮಂಡ್ಯ ತುಮಕೂರು ಜಿಲ್ಲೆಗಳ ರೈತರ ಬದುಕು ಹಸಿರಾಗಿದೆ ಹೌದಷ್ಟೇ..!

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248